# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ,
ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ.ಬಿ.ಬಿ.ಎಂ.ಪಿ/ಸ.ಕಾ.ಅ/ಹೊ.ಉ.ವಿ/ಪಿ.ಆರ್/ /2022-23 ದಿನಾಂಕ: 03.12.2022

**ದಿನಾಂಕ-03.12.2022 ರಂದು ಅಪರಾಹ್ನ.1.00 ಗಂಟೆಗೆ ವಿಜಿನಾಪುರ ವಾರ್ಡ್ ಸಂಖ್ಯೆ-85 ರ ವಾರ್ಡ್ ಕಮಿಟಿ ಸಭೆಯನ್ನು ಆಯೋಜಿಸಿದ್ದು, ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಹಾಗೂ ಸ್ಥಳೀಯ ನಿವಾಸಿಗಳ ಹಾಜರಾತಿ ಹಾಗೂ ಸಭೆಯ ನಡುವಳಿಗಳು**

| | ಸದಸ್ಯರ ಹೆಸರು ಮತ್ತು ಪದನಾಮ | ದೂರವಾಣಿ ಸಂಖ್ಯೆ |
|---|---|---|
| 1 | ಶ್ರೀ.ಎ.ಜಿ.ಚಂದ್ರಶೇಖರ್ ನೋಡೆಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ-85 ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ | 9480688328 |
| 2 | ಶ್ರೀ.ಸೋಮನಾಥ್ ಜಾದವ್ ಸಹಾಯಕ ಅಭಿಯಂತರರು ವಾರ್ಡ್ ನಂ.85 ಹಾಗೂ ಕಾರ್ಯದರ್ಶಿ | 9697157555 |
| 3 | ಶ್ರೀ.ಸುನೀಲ್ ಕುಮಾರ್ ಎಸ್.ಆರ್, ಸಹಾಯಕ ಅಭಿಯಂತರರು, ವಾರ್ಡ್ ನಂ.85 | 9113615297 |
| 4 | ಶ್ರೀ.ಮಂಜುನಾಥ ಬಡಿಗೇರ್ ರೆವಿನ್ಯೂ ಇನ್ಸ್‌ಪೆಕ್ಟರ್, ವಿಜಿನಾಪುರ | 9620447217 |
| 5 | ಶ್ರೀ.ಮಗೇಶ್ವರಿ – ಜೆ.ಹೆಚ್.ಐ | 9972316621 |
| 6 | ಶ್ರೀ.ಶ್ರೀಕಾಂತ್ ಬೀದಿ ದೀಪಗಳ ನಿರ್ವಹಣೆ ಸಹಾಯಕ | 9108788427 |
| 7 | ಶ್ರೀ.ಗಂಗಾದರಪ್ಪ, ಕೆಲಸ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ | 7259701705 |
| 8 | ಶ್ರೀ.ಟಿ.ಮಾರಣ್ಣ (ಹೆಡ್ ಕಾನ್ಸ್‌ಟೇಬಲ್) ರಾಮಮೂರ್ತಿನಗರ ಪೋಲೀಸ್ ಠಾಣೆ. | 9880665112 |
| | ಸಾರ್ವಜನಿಕರು | |
| 9 | ಶ್ರೀ.ಶಿವರಾಮ್.ಹೆಚ್, ಈಸ್ಟ್ ಆಫ ಎನ್.ಜಿ.ಎಫ್ ಕಸ್ತೂರಿನಗರ ಅಸೋಸಿಯೇಷನ್ | 9845228625 |
| 10 | ಶ್ರೀ.ಬಷೀರ್ ಜಮಾದಾರ್, ಶ್ರೀ.ಮುಕ್ತಿಯರ್ ಖಾನ್, ಶ್ರೀ.ನೂರ್‌ಭಾಷಾ ವಿಜಿನಾಪುರ | 9448143786 |
| 11 | ಶ್ರೀ.ರಾಜು ಉಪಾಧ್ಯಕ್ಷರು ವಿಜಿನಾಪುರ | 9036174445 |
| 12 | ಶ್ರೀ.ಹರಿಬಾಬು | 9343780707 |
| 13 | ಶ್ರೀ.ಶಕ್ತಿ.ಎ (ಕೆ.ಡಬ್ಲ್ಯೂ.ಎ) | 9880533533 |
| 14 | ಶ್ರೀ.ರಘು ಶೆಟ್ಟಿ | 8088801235 |
| 15 | ಶ್ರೀ.ಹೇಮಂತ್ | 9341996666 |
| 16 | ರಮೇಶ್ ಗೌಡ | 9980183898 |
| 17 | ವಿ.ದೇವರಾಜು | 9945896089 |

ದಿನಾಂಕ-03.12.2022 ರಂದು ಅಪರಾಹ್ನ 1.00 ಗಂಟೆ ಸಮಯದಲ್ಲಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯನದಾಗಿ ಶ್ರೀ.ಸೋಮನಾಥ್ ಜಾದವ್ ಸಹಾಯಕ ಅಭಿಯಂತರರು ವಾರ್ಡ್ ನಂ.85, ಕಾರ್ಯದರ್ಶಿ ರವರು ಸಭೆಯಲ್ಲಿ ಹಾಜರಿರುವ ಸದಸ್ಯರುಗಳು ಮತ್ತು ಅಧಿಕಾರಿ ವೃಂಧದವರಿಗೆಲ್ಲಾ ಸ್ವಾಗತಕೋರಿದರು. ತದನಂತರ ಈ ಕೆಳಕಂಡ ವಿಷಯಗಳ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಯಿತು.

**1. ಶ್ರೀ.ರಾಜು :-** ರವರು ಮಾತನಾಡಿ ವಿಜಿನಾಪುರ ಆರ್.ಆರ್ ಬಡಾವಣೆಯಲ್ಲಿ ರಾಜಕಾಲುವೆ ಮೇಲೆ ಕವರಿಂಗ್ ಸ್ಲ್ಯಾಬ್ ಅಳವಡಿಸಲು ಕೋರಿದ್ದು, ಮತ್ತು 7 ಎಲೆಕ್ಟ್ರಿಕ್ ಪೋಲ್‌ಗಳನ್ನು ಬದಲಾಯಿಸಿಕೊಡಲು ಕೋರಿದ್ದು, ಹಾಗೂ ಗಂಗಾ ಸ್ಟ್ರೀಟ್, ತುಂಗಾ ಸ್ಟ್ರೀಟ್ ಮತ್ತು ಆರ್.ಆರ್.ನಗರ 4ನೇ ಅಡ್ಡರಸ್ತೆಯಲ್ಲಿ ಡೀಸಿಲ್ಟಿಂಗ್ ಮಾಡಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.

**ಕ್ರಮ:-** ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರು ಕಾಲುವೆ ಮಹದೇವಪುರ ವಲಯ ರವರಿಗೆ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**2. ಶ್ರೀ.ಬಷೀರ್ ಜಮಾದಾರ್ :-** ರವರು ಮಾತನಾಡಿ ಆರ್.ಟಿ.ಓ ಪಕ್ಕದಲ್ಲಿ ಸಾರ್ವಜನಿಕ ರಸ್ತೆಯಲ್ಲಿ ಹೊಸದಾಗಿ ಚರಂಡಿಯನ್ನು ಅಳವಡಿಸಿಕೊಡಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.

**ಕ್ರಮ:-** ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**3. ಶ್ರೀ.ಹರಿಬಾಬು :-** ರವರು ಮಾತನಾಡಿ ರಾಮಮೂರ್ತಿನಗರ ಮುಖ್ಯರಸ್ತೆಯಲ್ಲಿರುವ ಚರಂಡಿಗಳಲ್ಲಿ ಹಾಕಲಾಗಿರುವ ಕವರಿಂಗ್ ಸ್ಲ್ಯಾಬ್ ಒಡೆದುಹೋಗಿರುತ್ತದೆ. ಆದುದರಿಂದ ಚರಂಡಿಗಳಿಗೆ ಹೊಸದಾಗಿ ಕವರಿಂಗ್ ಸ್ಲ್ಯಾಬ್ ಅಳವಡಿಸಲು ಕೋರಿದ್ದು, ಮತ್ತು ಕುಮಾರನ್ ಶಾಲೆಯ ಬಳಿ ರಸ್ತೆಯಲ್ಲಿ ಗೊಂಡಿ ಬಿದ್ದಿರುತ್ತದೆ. ಇದರಿಂದ ವಾಹನ ಸಂಚಾರಕ್ಕೆ ಮತ್ತು ಪಾದಚಾರಿಗಳಿಗೆ ಅನಾಹುತವಾಗುವ ಸಂಭವವಿರುವುದರಿಂದ ತುರ್ತಾಗಿ ರಸ್ತೆಯಲ್ಲಿ ಬಿದ್ದಿರುವ ಗುಂಡಿಯನ್ನು ಮುಚ್ಚಬೇಕೆಂದು ಕೋರಿರುತ್ತಾರೆ.

**ಕ್ರಮ:-** ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**4. ಶ್ರೀ.ಹೇಮಂತ್ ಕುಮಾರ್ :-** ರವರು ಮಾತನಾಡಿ ರಾಮಮೂರ್ತಿನಗರ ಪೋಲೀಸ್ ಠಾಣೆ ಮುಂಭಾಗದ ರಸ್ತೆಗಳಲ್ಲಿ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಿಕೊಡಬೇಕೆಂದು ಕೋರಿದ್ದು, ಮತ್ತು ಸದರಿ ರಸ್ತೆಗಳ ಚರಂಡಿಗಳಲ್ಲಿ ಹಾಕಲಾಗಿರುವ ಕವರಿಂಗ್ ಸ್ಲ್ಯಾಬ್ ಒಡೆದುಹೋಗಿರುತ್ತದೆ. ಆದುದರಿಂದ ಚರಂಡಿಗಳಿಗೆ ಹೊಸದಾಗಿ ಕವರಿಂಗ್ ಸ್ಲ್ಯಾಬ್ ಅಳವಡಿಸಲು ಕೋರಿದ್ದು,

**ಕ್ರಮ:-** ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**5. ಶ್ರೀ.ಶಿವರಾಮ್.ಹೆಚ್ :-** ರವರು ಮಾತನಾಡಿ ಈಸ್ಟ್ ಆಫ್ ಎನ್.ಜಿ.ಎಫ್ ನೇ ಮುಖ್ಯರಸ್ತೆಯಲ್ಲಿ ಬೀದಿ ದೀಪಗಳನ್ನು ಬದಲಾಯಿಸಲು ಕೋರಿರುತ್ತಾರೆ.

**ಕ್ರಮ:-** ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**6. ಶ್ರೀ.ರಘುಶೆಟ್ಟಿ :-** ರವರು ಮಾತನಾಡಿ ವಿಜಿನಾಪುರ ವ್ಯಾಪ್ತಿಯಲ್ಲಿರುವ ಜಿ.ಎಲ್.ಆರ್ ರಸ್ತೆ ಹಾಗೂ ಕೆಂಪೇಗೌಡ ಅಂಡರ್‌ಪಾಸ್ ರಸ್ತೆ ಹಾಳಾಗಿದ್ದು, ಈ ರಸ್ತೆಯನ್ನು ತುರ್ತಾಗಿ ಸರಿಪಡಿಸಿಕೊಡಬೇಕೆಂದು ಸಭೆಯಲ್ಲಿ ಕೋರಿದರು.

**ಕ್ರಮ:-** ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**7. ಶ್ರೀ.ದೇವರಾಜು :-** ರವರು ಮಾತನಾಡಿ ಕುವೆಂಪುನಗರದ ರಾಜಕಾಲುವೆಯಲ್ಲಿ ಡೀಸಿಲ್ಟಿಂಗ್ ಮಾಡಬೇಕೆಂದು ಕೋರಿದ್ದು, ಮತ್ತು ಮಿನಿ ತಾಜ್‌ಮಹಲ್ ರಸ್ತೆಯ ಚರಂಡಿಯ ಮೇಲೆ ವ್ಯಾಪಾರಕ್ಕೆ ಅಂಗಡಿಗಳು ಇಟ್ಟುಕೊಂಡಿರುವುದರಿಂದ ಪಾದಚಾರಿಗಳಿಗೆ ರಸ್ತೆಯಲ್ಲಿ ಓಡಾಡಲು ತೊಂದರೆಯಾಗುತ್ತಿರುತ್ತದೆ. ಇದರ ಬಗ್ಗೆ ಕ್ರಮ ವಹಿಸಬೇಕೆಂದು ಸಭೆಯಲ್ಲಿ ಕೋರಿದರು.

**ಕ್ರಮ:-** ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ನೋಡಲ್ ಅಧಿಕಾರಿಗಳು ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯ ಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ಸಭೆಗೆ ಹಾಜರಾಗದ ಅಧಿಕಾರಿಗಳ ವಿರುದ್ಧ ಅಸಮಧಾನ ವ್ಯಕ್ತಪಡಿಸಿ ಮುಂದಿನ ಸಭೆಯಲ್ಲಿ ಎಲ್ಲರೂ ಹಾಜರಾಗಲೂ ಕ್ರಮಕೈಗೊಳ್ಳಲು ಕೋರಿಕೊಂಡಿದ್ದು, ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಶ್ರೀ.ಸೋಮನಾಥ್ ಜಾದವ್
**ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು**
**ವಿಜಿನಾಪುರ ವಾರ್ಡ್ ಸಂಖ್ಯೆ- 85**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

(ಶ್ರೀ.ಎ.ಜಿ.ಚಂದ್ರಶೇಖರ್)
**ನೋಡೆಲ್ ಅಧಿಕಾರಿಗಳು**
**ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು**
**ಹೊರಮಾವು ಉಪ-ವಿಭಾಗ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಪ್ರತಿಯನ್ನು:-
1.ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಮಂಡಿಸಲಾಗಿದೆ.
2.ಕಛೇರಿ ಪ್ರತಿ.